ಹಾಸನ ಡಿಸ್ಟ್ರಿಕ್ಟು.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸ್ರ 1909ನೆ ಜುಲೈ ಗುರ್ರೇ ಲಾಗಾಯಿತು 1911ನೆ ಜೂನ್ ಆಖೈರುವರಿಗಾಗುವ 2 ಸಾಲುಗಳಲ್ಲಿ ಹೊಳೇ ನರಸೀಪುರದ ಸೇತುವೆ ಬಳಿ ಇಟ್ಟಿರುವ ಟೋಲ್ ಗೇಟು ಬಳಿ ಸುಂಕ ವಸೂಲ್ಮಾಡುವ ಹಕ್ಕನ್ನು 1909ನೆ ಇಸವಿ ಜೂನ್ ಮಾಹೆ ತಾರೀಖು 16ನೆ ಬುಧವಾರ ಹೊಳೇನರಸೀಪುರದ ತಾಲ್ಲೂಕು ಕಚೇರಿಯಲ್ಲಿ ಜನರಲ್ ಅಸಿಸ್ಟೆಂಟ್ ಕಮಿಷನರವರ ರೂಬರೂಬ್ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಸುಂಕ ವಸೂಲ್ಮಾಡುವ ಹಕ್ಕನ್ನು ಹರಾಜಿನಲ್ಲಿ ಪಡದ ಕಂಟ್ರಾಕ್ಟುದಾರನು ಷೆಡ್ಯೂಲಿನಲ್ಲಿ ಕಂಡ ದರಗಳಂತೆಯೆ ಟೋಲ್ ಗೇಟು ಮೂಲಕ ಹೋಗತಕ್ಕ ಮತ್ತು ಬರತಕ್ಕ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡತಕ್ಕದ್ದು. ಈ ದರಗಳಿಗೆ ಮಿಾರಿದ ಹೆಚ್ಚು ದರಗಳನ್ನು ಖಂಡಿತ ವಸೂಲ್ಮಾಡಕೂಡದು.

3. ಛಡ ದರಖಾಸ್ತನ್ನಾಗಲಿ, ಯಾ, ಇತರ ದರಖಾಸ್ತುಗಳನ್ನಾಗಲಿ, ಕಾರಣ ನಮೂದಿಲ್ಲದೆ ಅಂಗೀಕಾರ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಡೆಪ್ಯುಟಿ ಕಮಿಷನರವರೇ ಉಳಿಸಿಕೊಂಡಿರುತ್ತಾರೆ ಮತ್ತು ಸದರಿಯವರಿಂದ ಹರಾಜು ಮುಂಜಾರಾದ ಹೊರ್ತು ಹರಾಜು ಸ್ಥಿರಪಡುವದಿಲ್ಲ.

4. ಛಡ ದರಖಾಸ್ತುದಾರನು ಹರಾಜಾದ ಕೂಡಲೆ ಹರಾಜು ಮೊಬಲಗಿನ ಪೈಕಿ ಬಂದು ಸಾಲಿನ ಬಾಬತು ಅರ್ಧ ಮಾಹೆ ಖಿಸ್ತು ಮೊಬಲಗನ್ನು ಕೊಡಬೇಕಲ್ಲದೆ, ಹರಾಜು ಡೆಪ್ಯುಟಿ ಕಮಿಷನರವರಿಂದ ಮುಂಜಾರಾದ ಮೂರು ದಿವಸಗಳೊಳಗೆ ಇನ್ನು ಬಂದುವರೆ ತಿಂಗಳ ಬಾಬತು ಖಿಸ್ತು ಮೊಬಲಗನ್ನು ಡಿಪಾಜಿಟ್ಟು ತರೀಕು ಪಾವತಿಮಾಡಿ ಕರಾರು ಅನುಸರಿಸಿ ನಡದುಕೊಳ್ಳತಕ್ಕ ಬಗ್ಗೆ ಕ್ರಮವಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡತಕ್ಕದ್ದು.

5. ಕಂಟ್ರಾಕ್ಟು ಮೊಬಲಗನ್ನು 24 ಖಿಸ್ತುಗಳು ಮಾಡಿಕ್ಕೊಂಡು ಪ್ರತಿ ಮಾಹೆ ಖಿಸ್ತನ್ನು ಬರುವ ಮಾಹೆ 10ನೆ ತಾರೀಖಿನೊಳಗೆ ಪಾವತಿ ಮಾಡುತ್ತಾ ಬರಬೇಕು. ಹಾಗೆ ತಪ್ಪಿದಲ್ಲಿ ಮಾಹೆಯಾನಾ ರೂಪಾಯಿ ಬಂದಕ್ಕೆ ಬಂದು ಪೈನಂತೆ ಸಕಾಲದಲ್ಲಿ ಪಾವತಿ ಮಾಡದೆ ತಪ್ಪಿದ ಮೊಬಲಗಿನಮೇಲೆ ಬಡ್ಡಿ ಕೊಡಬೇಕು. ಕಂಟ್ರಾಕ್ಟು ಷರತ್ತು ಅನುಸರಿಸಿ, ಕಂಟ್ರಾಕ್ಟುದಾರನು ನಡದುಕೊಂಡಲ್ಲಿ ಮೊದಲು ಕೊಟ್ಟಿರುವ 2 ಮಾಹೆಗಳ ಬಾಬತು ಡಿಪಾಜಿಟ್ಟು ಖಿಸ್ತು ಮೊಬಲಗನ್ನು 2ನೆ ಸಾಲಿನ ಆಖೈರು 2 ಖಿಸ್ತುಗಳಿಗೆ ಜಮಾ ಕಟ್ಟಿಕೊಳ್ಳಲ್ಪಡುತ್ತೆ.

6. 4ನೆ ಪ್ಯಾರಾದಲ್ಲಿ ಕಂಡ ಪೂರ, ಅಥವಾ, ಬಂದು ಭಾಗದಷ್ಟು ಡಿಪಾಜಿಟ್ಟು ಮೊಬಲಗು ಕೊಡದೆ ತಪ್ಪಿದ್ದಾಗಲಿ, ಅಥವಾ 5ನೆ ಪ್ಯಾರಾದಲ್ಲಿ ಕಂಡ ಮಾಹೆ ಖಿಸ್ತು ಮೊಬಲಗನ್ನು ಸಕಾಲದಲ್ಲಿ ಕೊಡದೆ ತಪ್ಪಿದಲ್ಲಿ, ಕಂಟ್ರಾಕ್ಟನ್ನು ಪುನಃ ಹರಾಜಿನಿಂದ ಲಾಗಲಿ ಯಾ ಇತರ ವಿಧವಾಗಿ ಆಗಲಿ, ಡೆಪ್ಯುಟಿ ಕಮಿಷನರವರಿಗೆ ಸೂಕ್ತ ಕಂಡಂತೆ ವಿಲೇವಾರಿ ಮಾಡುವದರಲ್ಲಿ ಬರುತ್ತೆ. ಈ ರೀತಿ ಮಾಡುವದರಿಂದ ನಷ್ಟವೇನಾದರೂ ಸಂಭವಿಸಿದಲ್ಲಿ ಇದನ್ನು ಕಂಟ್ರಾಕ್ಟರಿಂದ ವಸೂಲ್ಮಾಡಲ್ಪಡುತ್ತೆ. ಲಾಭವೇನಾದರೂ ಬಂದಲ್ಲಿ ಇದಕ್ಕೆ ಕಂಟ್ರಾಕ್ಟರು ಭಾಗಿಯಾಗುವದಿಲ್ಲ.

7. ಸದರಿ ಟೋಲ್ ಗೇಟು ಮೂಲಕ ಸಾಗುವ ಗಾಡಿ ವಗೈರೆಗಳ ಬಾಬತು ಕರಾರ್ವಾಕ ಲೆಕ್ಕವನ್ನು ಮತ್ತು ರೋಜುವಾರು ವಸೂಲಿ ಲೆಕ್ಕವನ್ನು ಸಹಾ ಇಡಬೇಕು. ಇಂಥಾ ಲೆಕ್ಕಗಳನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳು ಅಪೇಕ್ಷಿಸಿದಾಗ್ಗೆ ತನಿಖೆಬಗ್ಗೆ ಹಾಜರ್ಪಡಿಸಬೇಕು.

8. ಹಾಲಿ ಇರುವ ಟೋಲ್ ಗೇಟು ಮತ್ತು ಟೋಲ್ ಮನೆಯನ್ನು ಬಳ್ಳೀ ಸ್ಥಿತಿಯಲ್ಲಿಟ್ಟುಕೊಂಡು ಉಪಯೋಗಿಸಿಕೊಳ್ಳಬಹುದು.

9. ಮೇಲ್ಕಂಡ ಪರತ್ತುಗಳಿದ್ದಾಗ್ಯೂ, ಲೋಕಲ್ ಬೋರ್ಡ್ಸ್ ರೂಲ್ಸಿನ 64ನೆ ಸೆಕ್ಷನ್ ಪ್ರಕಾರ ಡಿಸ್ಟ್ರಿಕ್ಟು ಬೋರ್ಡ್ ಪ್ರೆಸಿಡೆಂಟರವರು ಯಾರ ಸಂಗಡಲಾದರೂ, ಯಾವ ತರಹಾದ ಗಾಡಿ, ಯಾ ರಾಸುಗಳಿಗೋಸ್ಕರವಾಗಿ ಬಂದು ನಿಷ್ಕರ್ಸಿಸಲ್ಪಟ್ಟುವ ಮೊಬಲಗ್ಗೆ ಕಂಪೌಂಡು ಮಾಡಿಕೊಳ್ಳುವದಕ್ಕೆ ಅಭ್ಯಂತರವಿರುವದಿಲ್ಲ. ಅಂಥಾ ಸಂಭವಗಳಲ್ಲಿ ಸದರಿ ನಿಷ್ಕರ್ಸಿಸಲ್ಪಟ್ಟ ಮೊಬಲಗನ್ನು ಕಂಟ್ರಾಕ್ಟರು ಕೊಡುವ ಮೊಬಲಗಿಗೋಸ್ಕರ ಜಮಾ ಕೊಡಲ್ಪಡುತ್ತೆ.

ಷೆಡ್ಯೂಲು.

ತಪಶೀಲ್.	ಭರ್ತಿ.			ಖಾಲಿ.		
	ರೂ.	ಆ.	ಪೈ.	ರೂ.	ಆ.	ಪೈ.
ನಾಲ್ಕು ಚಕ್ರದ ಗಾಡಿ	0	8	0	0	4	0
ಎರಡು ಡಿಟೋ	0	4	0	0	2	0
ಪ್ರತಿ ಎತ್ತು, ಯಾ ಎಮ್ಮೆಗೆ	0	0	6	...		
ಆನೆ ಬಂದಕ್ಕೆ	1	0	0	1	0	0
ಒಂಟೆ ಬಂದಕ್ಕೆ	0	8	0	0	8	0
ಪ್ರತಿ ಕುದುರೆಗೂ ಹೇರಿನಲ್ಲಾಗಲಿ ಸವಾರಿಯಾಗಲಿ	0	1	0	0	1	0
ಕತ್ತೆ ಡಿಟೋ	0	0	6	...		

ನೋಟ್ :—1. ಪಾದಚಾರಿಯಾದವರ ಮೇಲೆ ಸುಂಕ ವಸೂಲ್ಮಾಡಕೂಡದು.

2. ಸೊಬ್ಬರದ ಭಂಡಿಯನ್ನು ಖಾಲಿ ಗಾಡಿಯಂತೆ ಭಾವಿಸತಕ್ಕದ್ದು.

3. ಸೂರ್ಯೋದಯದಿಂದ ಸೂರ್ಯೋದಯಕ್ಕೆ ಆಗುವ 24 ಘಂಟೆಗಳೊಳಗೆ ಬಂದೇ ಸುಂಕ ವಸೂಲ್ಮಾಡತಕ್ಕದ್ದು.

4. ಲೋಕಲ್ ಬೋರ್ಡು ರೂಲ್ಸಿನಲ್ಲಿರುವ 64, 65, 67, 68, 69ನೆ ರೂಲುಗಳಲ್ಲಿ ಕಂಡ ಷರತ್ತುಗಳಿಗನುಸಾರವಾಗಿ ಕಂಟ್ರಾಕ್ಟರು ನಡದುಕೊಳ್ಳಬೇಕು.

5. ಹೇರು ಇಲ್ಲದ ಎತ್ತು, ಕೋಣ ಮತ್ತು ಹಸು, ಕರು ಇವುಗಳಿಗೆ ಸುಂಕ ವಸೂಲ್ಮಾಡತಕ್ಕದ್ದಲ್ಲ.

6. ಟೋಲು ಗೇಟಿ ಸಮೀಪದಲ್ಲಿರುವ ಗ್ರಾಮಗಳ ವ್ಯವಸಾಯ ಮಾಡುವ ರೈತರು ತಮ್ಮ ಗಾಡಿ ವಗೈರೆಗಳನ್ನು ಗೇಟು ಮೂಲಕ ತೆಗದುಕ್ಕೊಂಡು ಹೋಗತಕ್ಕ ಬಗ್ಗೆ 21—12—07ರ ಮರ್ಕುಂ 6008–15—114–07–6ನೆ ನಂಬರ್ ಪ್ರೊಸೀಡಿಂಗ್ಸ್ ಅನುಸಾರ ಬಂದು ವರುಷದ ಭಾರ್ಜು ಪೈಕಿ $\frac{1}{16}$ನೆ ಭಾಗವನ್ನು ಕೊಟ್ಟು ಡಿಸ್ಟ್ರಿಕ್ಟು ಬೋರ್ಡಿನವರ ಸಂಗಡ ಕಾಂಪೌಂಡು ಮಾಡಿಕೊಳ್ಳಬಹುದು.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸನ್ 1909ನೆ ಜುಲೈ ಗುರ್ರೆ ಲಾಗಾಯಿತು 1911ನೆ ಜೂನ್ ಆಖೈರುವರಿಗಾಗುವ 2 ಸಾಲುಗಳಲ್ಲಿ ಹಾರ್ಸ–ಅರಸೀಕೆರೆ ರಸ್ತೆ ಮೇಲೆ ದುದ್ದದ ಬಳಿ ಇಟ್ಟಿರುವ ಟೋಲ್ ಗೇಟು ಬಳಿ ಸುಂಕ ವಸೂಲ್ಮಾಡುವ ಹಕ್ಕನ್ನು 1909ನೆ ಇಸವಿ ಜೂನ್ 19ನೆ ತಾರೀಖು ಶನಿವಾರ ಮಧ್ಯಾಹ್ನ 12 ಘಂಟೆಗೆ ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷನರವರ ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಪ್ರಸಕ್ತವಾದ ಸುಂಕ ವಸೂಲ್ಮಾಡುವ ಹಕ್ಕನ್ನು ಹರಾಜಿನಲ್ಲಿ ಪಡದ ಕಂಟ್ರಾಕ್ಟುದಾರನು ಷೆಡ್ಯೂಲಿನಲ್ಲಿ ಕಂಡ ದರಗಳಂತೆಯೆ ಸದರಿ ಟೋಲ್ ಗೇಟು ಮೂಲಕ ಹೋಗತಕ್ಕ ಬರತಕ್ಕ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡತಕ್ಕದ್ದು. ಈ ದರಗಳಿಗೆ ಮಿಗಿಲಾದ ಹೆಚ್ಚು ದರಗಳಲ್ಲಿ ವಸೂಲ್ಮಾಡಕೂಡದ್ದು.

3. ಛಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲೀ ಕಾರಣ ನಮೂದಿಲ್ಲದೆ ಅಂಗೀಕಾರ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಡೆಪ್ಯೂಟಿ ಕಮಿಷನರವರೇ ಉಳಿಸಿಕೊಂಡಿರುತ್ತಾರೆ. ಮತ್ತು ಸದರಿಯವರಿಂದ ಹರಾಜು ಮಂಜೂರಾದ ಹೊರ್ತು ಹರಾಜು ಸ್ಥಿರಪಡುವದಿಲ್ಲ.

4. ಛಡ ದರಖಾಸ್ತುದಾರನು ಹರಾಜಾದ ಕೂಡಲೆ ಹರಾಜು ಮೊಬಲಗಿನ ಪೈಕಿ ಬಂದು ಸಾಲಿನ ಬಾಬತು ಅರ್ಧ ಮಾಹೆ ಖಿಸ್ತು ಮೊಬಲಗನ್ನು ಕೊಡಬೇಕಲ್ಲದೆ ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರಾದ 15 ದಿವಸಗಳೊಳಗೆ ಇನ್ನು ಬಂದು ವರೆ ತಿಂಗಳ ಬಾಬತು ಖಿಸ್ತು ಮೊಬಲಗನ್ನು ಡಿರಾಜಿಟ್ಟು ತರೀಕು ಪಾವತಿಮಾಡಿ ಕರಾರು ಅನುಸರಿಸಿ ನಡದುಕೊಳ್ಳತಕ್ಕ ಬಗ್ಗೆ ಕ್ರಮವಾಗಿ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರದುಕೊಡತಕ್ಕದ್ದು.

5. ಕಂಟ್ರಾಕ್ಟು ಮೊಬಲಗನ್ನು 24 ಖಿಸ್ತುಗಳು ಮಾಡಿಕ್ಕೊಂಡು ಪ್ರತಿ ಮಾಹೆ ಖಿಸ್ತನ್ನು ಬರುವ ಮಾಹೆ 10ನೆ ತಾರೀಖಿನೊಳಗೆ ಪಾವತಿಮಾಡುತ್ತಾ ಬರಬೇಕು. ಹಾಗೆ ತಪ್ಪಿದಲ್ಲಿ ಮಾಹೆಯಾನಾ ರೂಪಾಯಿ ಬಂದಕ್ಕೆ ಬಂದು ಪೈನಂತೆ ಸಕಾಲದಲ್ಲಿ ಪಾವತಿಮಾಡದೆ ತಪ್ಪಿದ ಮೊಬಲಗಿನಮೇಲೆ ಬಡ್ಡಿ ಕೊಡಬೇಕು. ಕಂಟ್ರಾಕ್ಟು ಷರತ್ತು ಅನುಸರಿಸಿ, ಕಂಟ್ರಾಕ್ಟುದಾರನು ನಡದುಕೊಂಡಲ್ಲಿ ಮೊದಲು ಕೊಟ್ಟಿರುವ 2 ಮಾಹೆಗಳ ಬಾಬತು ಡಿಪಾಜಿಟ್ಟು ಖಿಸ್ತು ಮೊಬಲಗನ್ನು ಆಖೈರಿನ 2 ಖಿಸ್ತುಗಳಿಗೆ ಜಮಾ ಕಟ್ಟಿಕೊಳ್ಳಲ್ಪಡುತ್ತೆ.

6. 4ನೆ ಪ್ಯಾರಾದಲ್ಲಿ ಕಂಡ ಪೂರ ಅಥವಾ ಬಂದು ಭಾಗದಷ್ಟು ಡಿಪಾಜಿಟ್ಟು ಮೊಬಲಗು ಕೊಡದೆ ತಪ್ಪಿದ್ದಾಗಲಿ, ಅಥವಾ 5ನೆ ಪ್ಯಾರಾದಲ್ಲಿ ಕಂಡ ಮಾಹೆ ಖಿಸ್ತು ಮೊಬಲಗನ್ನು ಸಕಾಲದಲ್ಲಿ ಕೊಡದೆ ತಪ್ಪಿದಲ್ಲಿ ಕಂಟ್ರಾಕ್ಟನ್ನು ಪುನಃ ಹರಾಜಿನಿಂದಾಗಲಿ, ಯಾ ಇತರ ವಿಧವಾಗಿ ಆಗಲಿ, ಡೆಪ್ಯೂಟಿ ಕಮಿಷನರವರಿಗೆ ಸೂಕ್ತ ಕಂಡಂತೆ ವಿಲೇವಾರಿ ಮಾಡುವದರಲ್ಲಿ ಬರುತ್ತೆ. ಈ ರೀತಿ ಮಾಡುವದರಿಂದ ನಷ್ಟವೇನಾದರೂ ಸಂಭವಿಸಿದಲ್ಲಿ ಇದನ್ನು ಕಂಟ್ರಾಕ್ಟರಿಂದ ವಸೂಲ್ಮಾಡಲ್ಪಡುತ್ತೆ. ಲಾಭವೇನಾದರೂ ಬಂದಲ್ಲಿ ಇದಕ್ಕೆ ಕಂಟ್ರಾಕ್ಟರು ಭಾಗಿಯಾಗುವದಿಲ್ಲ.

7. ಸದರಿ ಟೋಲ್‌ಗೇಟು ಮೂಲಕ ಸಾಗುವ ಗಾಡಿ ವಗೈರೆಗಳ ಬಾಬತು ಕರಾರ್ವಾಕ ಲೆಕ್ಕವನ್ನು ಮತ್ತು ರೋಜುವಾರು ವಸೂಲಿ ಲೆಕ್ಕವನ್ನು ಸಹಾ ಇಡಬೇಕು. ಇಂಥಾ ಲೆಕ್ಕಗಳನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳು ಅಪೇಕ್ಷಿಸಿದಾಗ್ಗೆ ತನಿಖೆ ಬಗ್ಗೆ ಹಾಜರ್ಪಡಿಸಬೇಕು.

8. ಹಾಲಿ ಇರುವ ಟೋಲ್ ಗೇಟು ಮತ್ತು ಟೋಲ್ ಮನೆಯನ್ನು ಬಳ್ಳೇ ಸ್ಥಿತಿಯಲ್ಲಿಟ್ಟುಕೊಂಡು ಉಪಯೋಗಿಸಿಕೊಳ್ಳಬಹುದು.

9. ಮೇಲ್ಕಂಡ ಷರತ್ತುಗಳಿಗೆ ವ್ಯತ್ಯಾಸ, ಲೋಕಲ್ ಬೋರ್ಡ್ಸ್ ರೂಲ್ಸಿನ 54ನೆ ಸೆಕ್ಷನ್ ಪ್ರಕಾರ ಪ್ರೆಸಿಡೆಂಟರವರು ಯಾರ ಸಂಗಡಲಾದರೂ, ಯಾವ ತರದ ಗಾಡಿ, ಯಾ ರಾಸುಗಳಿಗೋಸ್ಕರವಾಗಿ ಬಂದು ನಿಷ್ಕರಿಸಲ್ಪಡುವ ಮೊಬಲಗ್ಗೆ ಕಂಪೌಂಡು ಮಾಡಿಕೊಳ್ಳುವದಕ್ಕೆ ಅನ್ಯಂತರವಿರುವದಿಲ್ಲ. ಅಂಥಾ ಸಂಭವಗಳಲ್ಲಿ ಸದರಿ ನಿಷ್ಕರಿಸಲ್ಪಟ್ಟ ಮೊಬಲಗನ್ನು ಕಂಟ್ರಾಕ್ಟರು ಕೊಡುವ ಮೊಬಲಗಿಗೋಸ್ಕರ ಜಮಾ ಕೂಡ ಪಡತ್ತೆ.

ಷೆಡ್ಯೂಲ್.

ತಪಶೀಲು.	ಭರ್ತಿ.			ಖಾಲಿ.		
	ರೂ.	ಆ.	ಪೈ.	ರೂ.	ಆ.	ಪೈ.
ನಾಲು ಚಕ್ರದ ಸಾರೋಟು ಗಾಡಿ	0	8	0	0	4	0
ಎರಡು ಡಿಟೋ ವಾ, ಗಾಡಿ	0	4	0	0	2	0
ನಾಲ್ಕು ಎತ್ತು, ಎಮ್ಮೆ, ಕುದುರೆ, ಕತ್ತೆ, ವಗೈರೆಯಿಂದ ಯಳೆಯಲ್ಪಟ್ಟ ಗಾಡಿಗೆ ...	0	8	0	0	4	0
ಎತ್ತು, ಯಾ ಎಮ್ಮೆಗೆ	0	1	0	0	0	3
ಆನೆ ಬಂದಕ್ಕೆ	1	8	0	1	8	0
ಬಂಟೆ	0	8	0	0	4	0
ಕುದುರೆ (ಸವಾರಿ ಸಹಿತ ಅಂದರೆ ಭಾರ ಹೇರಿದ್ದು)...	0	1	6	0	0	9
ತಟ್ಟು ಯಾ ಹೇಸರಕತ್ತೆ (ಡಿಟೋ)...	0	0	9	0	0	6
ಕತ್ತೆ	0	0	6	0	0	1
ಆಡು, ಕುರಿ, ಹಂದಿ ಬಂದಕ್ಕೆ		...		0	0	1
8 ಜನ ಹೊತ್ತ ಪಾಲಕ್ಕಿ, ಧೋಲಿ, ವ್ಯಾನಾಕ್ಕೆ	1	0	0		...	
6 ಜನ ಡಿಟೋ ಡಿಟೋ	0	12	0		...	
4 ಜನ ಡಿಟೋ ಡಿಟೋ	0	8	0		...	
2 ಜನ ಡಿಟೋ ಡಿಟೋ	0	4	0		...	

ನೋಟ್ :—1. ಕಾಲ್ನಡಿಗೆ ಹೋಗುವರಿಂದ ಸುಂಕ ವಸೂಲ್ಮಾಡಕೂಡದು.

2. ಸೂರ್ಯೋದಯದಿಂದ ಸೂರ್ಯೋದಯಕ್ಕೆ ಆಗುವ 24 ಘಂಟೆಗಳೊಳಗೆ ಬಂದೇ ಸುಂಕ ವಸೂಲ್ಮಾಡತಕ್ಕದ್ದು

3. ಟಪಾಲ್ ತೆಗದುಕ್ಕೊಂಡು ಹೋಗಿ ಬರುವ ಟಾಂಗಾ ಗಾಡಿಗಳಿಗೆ ಸುಂಕವಿಲ್ಲ.

4. ಲೋಕಲ್ ಬೋರ್ಡು ರೂಲ್ಸಿನಲ್ಲಿನ 64, 65, 67, 68, 69ನೆ ರೂಲುಗಳಲ್ಲಿ ಕಂಡ ಪರತ್ತುಗಳಿಗನುಸಾರವಾಗಿ ಕಂಟ್ರಾಕ್ಟರು ನಡದುಕೊಳ್ಳಬೇಕು.

5. ಟೋಲು ಗೇಟ್ ಸಮೀಪದಲ್ಲಿರುವ ಗ್ರಾಮಗಳ ವ್ಯವಸಾಯ ಮಾಡುವ ರೈತರು ತಮ್ಮ ಗಾಡಿ ವಗೈರೆಗಳನ್ನು ಗೇಟು ಮೂಲಕ ತೆಗದುಕೊಂಡು ಹೋಗತಕ್ಕ ಬಗ್ಗೆ 21—12—07ರ ಮುಕುಂ 6008—15-114-07-6ನೆ ನಂಬರ್ ಪ್ರೊಸೀಡಿಂಗ್ಸ್ ಪ್ರಕಾರ ಬಂದು ವರುಷದ ಖಾರ್ಜು ಪೈಕಿ $\frac{1}{16}$ ಭಾಗವನ್ನು ಕೊಟ್ಟು ಡಿಸ್ಟ್ರಿಕ್ಟ್ ಬೋರ್ಡಿನವರ ಸಂಗಡ ಕಾಂಪೌಂಡು ಮಾಡಿಕೊಳ್ಳಬಹುದು.

ನೋಟಿಫಿಕೇಷ್ನ್, ತಾರೀಖು ನೆ ಮೇ 1909.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—ಹಾಸನ ಡಿಸ್ಟ್ರಿಕ್ಟ್ಸ ಮಂಜರಾಬಾದು ತಾಲ್ಲೂಕಿನಲ್ಲಿರುವ ಮೂರ್ನಹಳ್ಳಿ ಟೋಲ್ ಗೇಟನಲ್ಲಿ ಸ್ ೧೯೦೯ನೆ ಇಸವಿ ಜುಲೈ ಮಾಹೆ 1ನೆ ತಾರೀಖು ಲಾಗಾಯಿತು ಸ್ ೧೯೧೦ನೆ ಜೂನ್ 30ರ ವರೆಗಿನ 12 ತಿಂಗಳ ಕಾಲದಲ್ಲಿ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು 1909ನೆ ಇಸವಿ ಜೂನ್ ಮಾಹೆ ತಾರೀಖು 19ನೆ ಶನಿವಾರ ಹಗಲು 12 ಘಂಟೆಗೆ ಮಂಜರಾಬಾದು ತಾಲ್ಲೂಕ್ ಕಚೇರಿ ಬಳಿ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ ರೂಬರೂಬ್ ಬಹಿರಂಗವಾಗಿ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

2. ಛಡ ಸವಾಲನ್ನೇ ಆಗಲಿ ಅಥವಾ ಯಾವ ಸವಾಲನ್ನೇ ಆಗಲಿ ಕಾರಣವನ್ನು ಹೇಳದೇನೇ ಅಂಗೀಕರಿಸುವ ಅಧಿಕಾರವನ್ನು ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರ್ ಸಾಹೇಬರವರು ಉಳಿಸಿಕೊಂಡಿರುತ್ತಾರೆ ಮತ್ತು ಡೆಪ್ಯೂಟಿ ಕಮಿಷನರ್ ಸಾಹೇಬರವರಿಂದ ಮಂಜೂರಾದ ಹೊರ್ತು ಹರಾಜು ಕಾಯಂ ಆದಹಾಗೆ ತಿಳಿಯಕೂಡದು.

3. ಛಡ ದರಖಾಸ್ತುದಾರನು ಹರಾಜ್ ಮೊಬಲಗಿನ ಪೈಕಿ ನಾಲ್ಕರಲ್ಲಿ ಒಂದು ಭಾಗವನ್ನು ಆ ಕೂಡಲೇ ಡಿಪಾಜಿಟ್ಟು ಇಡಬೇಕಲ್ಲದೆ ಬಾಕಿ ಉಳಿದ ಮೊಬಲಗನ್ನು ಸ್ ೧೯೦೯ನೆ ಇಸವಿ ಜುಲೈ 20ರ ಲಾಗಾಯಿತು ಸವುವಾದ 3 ಖಿಸ್ತುಗಳಾಗಿ ಪ್ರತಿ ಮಾಹೆ 20ನೆ ತಾರೀಖಿಗೆ ಪಾವತಿ ಮಾಡಲು ಬದ್ಧನಾಗಿರಬೇಕು. ಹರಾಜು ಮಂಜೂರಾತಿಯು ತನಗೆ ತಿಳಿಸಲ್ಪಟ್ಟ ತಾರೀಖು ಲಾಗಾಯಿತು 15 ದಿವಸಗಳ ವಳಗೆ ಕ್ರಮವಾದ ಮುಚ್ಚ್ಳಿಕೆ ಬರದುಕೊಡಬೇಕು. ಅಲ್ಲದೆ ಈ ಕೆಳಗೆ ನಮೂದಿಸುವ ಪರತ್ತಿಗೆ ವಳಪಟ್ಟು ಕಂಟ್ರಾಕ್ಟಿನಂತೆ ತಾನು ಸರಿಯಾಗಿ ನಡದುಕೊಳ್ಳತಕ್ಕ ಬಗ್ಗೆ ಖಾತರಿ ಜಾಮೀನು ಕೊಡಬೇಕು. ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೆಯೂ ಮುಚ್ಚ್ಳಿಕೆ ಬರದುಕೊಡದೆಯೂ ತಪ್ಪಿದರೆ ಬಾಬನ್ನು ದುಸರೆ ಹರಾಜು ಮೂಲಕ ವಿಕ್ರಯಿಸುವದಲ್ಲದೆ ನಷ್ಟಕ್ಕೆ ತಪ್ಪತಸ್ಥನಾದ ಇಜಾರೆದಾರನನ್ನು ಗುರಿಪಡಿಸುತ್ತೆ. ಶಿವಾಯಿ ಹಾಗೆ ಬಾಬನ್ನು ದುಸರೆ ಹರಾಜು ಮಾಡೋಣದರಲ್ಲಿ ಉಂಟಾಗುವ ಆದಾಯಕ್ಕೆ ಅವನು ಭಾಗಿಯಾಗಲಾರನು.

4. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿ ಆದ ಮೊಬಲಗಿಗೆ ಪಾವತಿ ತಾರೀಖಿನ ವರಿಗೆ ಮಾಹೆಯಾನಾ ರೂಪಾಯಿ 1ಕ್ಕೆ 1 ಪೈ ನಂತೆ ಬಡ್ಡಿ ಸೇರಿಸಿ ವಸೂಲ್ಮಾಡಲ್ಪಡುತ್ತೆ. ಮತ್ತು ಡೆಪ್ಯೂಟಿ ಕಮಿಷನರ್ ಸಾಹೇಬರವರಿಗೆ ಯುಕ್ತ ತೋರಿದರೆ ಅಥವಾ ಜಾಮೀನ್‌ದಾರನು ಅಪೇಕ್ಷಿಸಿದರೆ ಕಂಟ್ರಾಕ್ಟ್ ದುಸರೆ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗುವದು, ಅ

ದರಿಂದ ಸರ್ಕಾರಕ್ಕೇನಾದರೂ ನಷ್ಟ ಸಂಭವಿಸಿದಲ್ಲಿ ಅದನ್ನು ಕಂಟ್ರಾಕ್ಟ್‌ದಾರನಿಂದಲೇ ಆಗಲಿ ಜಾಮೀನ್‌ದಾರನಿಂದಲೇ ಆಗಲಿ ಕಂದಾಯ ಬಾಕಿಯಂತೆ ವಸೂಲ್ಮಾಡಲ್ಪಡುತ್ತೆ.

5. ಹರಾಜು ಮೊಬಲಗು ಶಿವಾಯಿ 3—4ನೆ ಕಾಲಂಗಳಲ್ಲಿ ನಮೂದಾಗುವ ಷರತ್ತುಗಳಿಗೆ ವಳಪಟ್ಟು ಖಜಾನೆಗೆ ಸಲಾಯಿಸುವ ಸದರಿ ಕಂಟ್ರಾಕ್ಟ್ ಮೊಬಲಗಿನ ರೂಪಾಯಿ ಬಂದಕ್ಕೆ ಬಂದಾಣಿಯಂತೆ ಲೋಕಲ್ ಸೆಸ್ಸು ಕೊಡಲಿಕ್ಕೆ ಇಜಾರೆದಾರನು ಬದ್ಧನಾಗಿರಬೇಕು.

6. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟ್‌ದಾರನು ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿರುವ ದರಗಳ ಮೇರೆಗೇನೆ ಟೋಲ್ ವಸೂಲ್ ಮಾಡಬೇಕು. ಮತ್ತು ಸನ್ 1876ನೆ ಇಸವಿ ನವಂಬರ್ 4ನೆ ತಾರೀಖಿನ ಚೀಫ್ ಕಮಿಷನರ್ ಸಾಹೇಬರವರ ನೋಟಿಫಿಕೇಷನ್ನಲ್ಲಿ ಪ್ರಾಯಿಷ್ ಆಗಿರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

7. ಪ್ರತಿದಿನದ ಟೋಲ್‌ಯಾನೆ ಸುಂಕದ ವಸೂಲಿ ತೋರಿಸುವ ನಿಜವಾದ ಮತ್ತು ಕರಾರ್ವಾರವಾದ ಲೆಕ್ಕವನ್ನು ಇಡಲು ಸಹಾ ಕಂಟ್ರಾಕ್ಟ್‌ದಾರನು ಬದ್ಧನಾಗಿರುವದಲ್ಲದೆ ಡಿಪ್ಯುಕ್ಕು ಮತ್ತು ತಾಲ್ಲೂಕು ಅಧಿಕಾರಿಗಳ ತನಿಖೆಗೆ ಸದರಿ ಲೆಕ್ಕಪುಪತ್ರ ವಳಪಟ್ಟಿರತಕ್ಕದ್ದು.

8. 7ನೆ ಷರತ್ತಿನಲ್ಲಿ ನಮೂದಿಸಿರುವ ಮೇರೆ ಕರಾರ್ವಾಕ ಅವಧಿ ರಫ್ತಿ ಲೆಕ್ಕವನ್ನು ಇಡಲೋಸ್ಕರ ಸಿಬ್ಬಂದಿ ಅಂದರೆ ಬಿಲ್ಲು ಮುತ್ಸದ್ದಿ ಖರ್ಚನ್ನು ಕಂಟ್ರಾಕ್ಟ್‌ದಾರನೆ ವಹಿಸಬೇಕು.

9. ಗೌರ್ನಮೆಂಟ್ ಟೋಲ್ ಮನೆ ಮತ್ತು ಟೋಲ್ ಗೇಟನ್ನು ಸಹಾ ಕಂಟ್ರಾಕ್ಟ್‌ದಾರನು ಉಪಯೋಗಿಸತಕ್ಕದ್ದು ಮತ್ತು ಅವುಗಳನ್ನು ಪೂರಾ ದುರಸ್ತಿನಲ್ಲಿಟ್ಟುಕೊಳ್ಳಬೇಕು ಹೋದಲ್ಲಿ ಅದರ ದುರಸ್ತಿನ ಬಗ್ಗೆ ತಗಲತಕ್ಕ ಖರ್ಚು ಕಂಟ್ರಾಕ್ಟ್‌ದಾರನಿಂದ ರೆವಿನ್ಯೂ ಬಾಕಿ ವಸೂಲಿ ರೂಲ್ಸ್ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

10. ಕಂಟ್ರಾಕ್ಟ್‌ದಾರನು ಪ್ರತಿ ಮಾಹೆ ಗುರ್ಕೇ ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲಿ ಲೆಕ್ಕವನ್ನು ಮಂಜರಾಬಾದು ತಾಲ್ಲೂಕು ಕಛೇರಿಗೆ ಕಳುಹಿಸತಕ್ಕದ್ದು.

11. ಕಂಟ್ರಾಕ್ಟ್‌ದಾರ ವಸೂಲ್ಮಾಡಬೇಕಾದ ದರಗಳ ತಪಸೀಲ್ ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದ್ಮಾಡಿದೆ :—

ಜಂಜರ್ ನಂ.	ತಪಸೀಲು.	ಮೊಬಲಗು.		
		ರೂ.	ಆ.	ಪೈ.
1	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2	,, ಎರಡು ಡಿಟೋ	1	0	0
3	,, ಯಕ್ಕಾ ವೇಲೆ	0	4	0
4	,, ಸ್ಪ್ರಿಂಗ್‌ಯಾನೆ ಬಿಲ್ಲಿನ ವೇಲೆ ಇರುವ ಭಂಡಿ 1ಕ್ಕೆ	0	2	0
5	,, ಎಂಟು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ ಯಾ ಹೇಸರು ಕತ್ತೆಗಳಿಂದ ಯಳೆಯಲ್ಪಟ್ಟ ಮತ್ತು ಬಿಲ್ಲಿನ ವೇಲೆ ಇಲ್ಲದ ಗಾಡಿ ಯಾ ಭಂಡಿ ಬಂದಕ್ಕೆ	1	8	0
6	,, ಡಿಟೋ ಡಿಟೋ ಭರ್ತಿ ಇಲ್ಲದ ಗಾಡಿ ಯಾ ಭಂಡಿ ಬಂದಕ್ಕೆ ...	0	8	0
7	,, ಆರು ಎತ್ತುಗಳು ವಗೈರೆಗಳಿಂದ ಯಳೆಯಲ್ಪಟ್ಟ ಗಾಡಿ ಯ ಭಂಡಿ ಬಂದಕ್ಕೆ ಭರ್ತಿ ಆಗಿದ್ದರೆ	0	12	0
8	,, ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	6	0
9	,, ನಾಲ್ಕು ಎತ್ತುಗಳು, ಡಿಟೋ ಭರ್ತಿಯಾಗಿದ್ದರೆ	0		0
10	,, ಡಿಟೋ ಭರ್ತಿ ಇಲ್ಲದಿದ್ದರೆ	0	4	0
11	,, ಎರಡು ಎತ್ತುಗಳು ವಗೈರೆ ಡಿಟೋ ಭರ್ತಿಯಾಗಿದ್ದರೆ	0	4	0
12	,, ಡಿಟೋ ಭರ್ತಿ ಇಲ್ಲದಿದ್ದರೆ	0	2	0
13	,, ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟಿದ್ದರೆ	0	1	0
14	,, ಡಿಟೋ ಹೊರಿಸಲ್ಪಡದಿದ್ದರೆ	0	0	3
15	,, ಆನೆಗೂ	1	8	0
16	,, ಒಂಟೆಗೂ ಹೊರಿಸಲ್ಪಟ್ಟಿದ್ದರೆ	0	8	0
17	,, ಡಿಟೋ ಹೊರಿಸಲ್ಪಡದೆ ಇದ್ದರೆ	0	4	0
18	,, ಕುದುರೆಗೂ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	1	6
19	,, ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ ಬಂದು ಕುದುರೆಗೂ ...	0	0	9
20	,, ತಟ್ಟು ಯಾ ಹೇಸರಕತ್ತೆ ಹೊರೆ ಹೊರಿಸಿದ್ದರೆ ಯಾ ಸವಾರಿ ಮಾಡುತ್ತಿದ್ದರೆ ...	0	0	9
21	,, ಡಿಟೋ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗತಕ್ಕ	0	0	6
22	,, ಕತ್ತೆಗೂ ಹೊರೆ ಹೊರಿಸಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	6
23	,, ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	0	0	1
24	,, ಪ್ರತಿ ಕುರಿ, ಮೇಕೆ, ಯಾ ಹಂದಿ	0	0	1
25	,, ಎಂಟು ಬೋರಿಗಳ್ಳೊಡನೆ, ಪ್ರತಿ ಡೋಲಿ ಯಾ ಪಾಲಕಿ ಪಾಲ್ಕಾ ಯಾ ಟಾಂಜಾನೆಗೂ ...	1	0	0
26	,, ಆರು ಡಿಟೋ ಡಿಟೋ ...	0	12	0
27	,, ನಾಲ್ಕು ಡಿಟೋ ಡಿಟೋ ...	0	8	0
28	,, ಇಬ್ಬರು ಡಿಟೋ ಡಿಟೋ ...	0	4	0

N. B.—ನಡೆದು ಬರುವ ಮಾರ್ಗಸ್ಥರ ಮೇಲೆ ಟೋಲ್ ವಸೂಲ್ ಮಾಡತಕ್ಕದ್ದಲ್ಲಾ.

ಬೇಲೂರು ಸೇತುವೆಮೇಲೆ ಸುಂಕ ವಸೂಲ್ಮಾಡುವ ಹಕ್ಕು ಹರಾಜು ಇಸ್ತಿಹ್ಕಾರ್.

ಹಾಸನ ಡಿಸ್ಟ್ರಿಕ್ಟು ಬೇಲೂರು ತಾಲ್ಲೂಕು ಬೇಲೂರು ಸೇತುವೆಯಮೇಲೆ 1909ನೆ ಇಸವಿ ಜುಲೈ ಗುರ್ತಿ ಲಾಗಾಯಿತು 1910ನೆ ಜೂನ್ ಆಖೈರುವರಿಗೆ ಸುಂಕ ವಸೂಲ್ಮಾಡುವ ಹಕ್ಕನ್ನು ಬೇಲೂರು ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಜೂನ್ ಮಾಹೆ ತಾರೀಖು 14ನೆ ಸೋಮವಾರ ದಿವಿ 12 ಘಂಟೆಗೆ ಸಕಲೀಕಪುರದ ಅಸಿಸ್ಟೆಂಟ್ ಕಮಿಷನರವರ ರೂಬುರೂಬು ಹರಾಜು ಮಾಡಲ್ಪಡುತ್ತೆ.

2. ಛಡ ಸವಾಲನ್ನು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರು ಕಾರಣ ನಮೂದಿಸದೆ ಮುಂಜೂರ್ಮಾಡುವ ಹಕ್ಕು ಯಾವ ಸವಾಲನ್ನೇ ಆಗಲಿ ತಿರಸ್ಕರಿಸುವದಕ್ಕು ಸ್ವಾತಂತ್ರ್ಯವನ್ನು ವಹಿಸಿರುತ್ತಾರೆ.

3. ಛಡ ಸವಾಲ್ದಾರನಾದ ಗುತ್ತಿಗೆದಾರನು ಸವಾಲಿಲ್ ಖೈದಾದ ಕೂಡಲೆ ಛಡ ಸವಾಲ್ ಮೊಬಲಗು ಪೈಕಿ $\frac{1}{4}$ ಭಾಗ ಮೊಬಲಗನ್ನು ಲೋಕಲ್ ಸೆಸ್ಸು ಸಹಿತವಾಗಿ ಹಾಜರ್ಮಾಡಬೇಕು. ಮತ್ತು ಹರಾಜು ಮುಂಜೂರಾದಕೂಡಲೆ 1909ನೆ ಜುಲೈ ತಾರೀಖು 20ರ ಲಾಗಾಯಿತು ಪ್ರತಿ ಮಾಹೆ 20ನೆ ತಾರೀಖಿನೊಳಗಾಗಿ ಸರಿಯಾದ 9 ಖಿಸ್ತುಗಳಲ್ಲಿ ಉಳಿದ ಹಣವನ್ನು ಬೇಲೂರು ತಾಲ್ಲೂಕು ಟ್ರೆಜರಿಗೆ ಪಾವತಿ ಮಾಡಬೇಕು. ಡಿಪಾಜಿಟ್ಟಿನಲ್ಲಿರುವ ಹಣವನ್ನು ಆಖೈರು ಮೂರು ಖಿಸ್ತಿಗೆ ಉತಾರು ಹಾಕಿಕೊಳ್ಳುತ್ತೆ. ಇದರ ಪರತ್ತಿನಂತೆ ಸರಿಯಾಗಿ ಮೊಬಲಗು ಪಾವತಿ ಮಾಡುವದಕ್ಕು ಖಾತರಿಯಾಗಿ ಇಬ್ಬರನ್ನು ಗುತ್ತಿಗದಾರನು ಜಾಮೀನ್ ಕೊಡಬೇಕಾದ್ದಲ್ಲದೆ ಹರಾಜು ಮುಂಜೂರಾದ ವಿಷಯವು ತಿಳುವಳಿಕೆಗೊಂಡ 3 ದಿವಸದಲ್ಲಿ ಗುತ್ತಿಗೆದಾರನು ಸರಿಯಾದ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದರೆ ಈ ಹಕ್ಕನ್ನು ಪುನಃ ಹರಾಜು ಮಾಡಿ ಅದರಲ್ಲಿ ಉಂಟಾಗುವ ಲುಕ್ಸಾನಿಗೆ ಅವಲ್ ಗುತ್ತಿಗದಾರನನ್ನು ಗುರಿ ಮಾಡಲ್ಪಡುತ್ತೆ. ಮತ್ತು ಈ ಲುಕ್ಸಾನು ಕಂದಾಯದ ಬಾಕಿಯಂತೆ ವಸೂಲ್ಮಾಡಲಾದೀತು.

4. ಮೇಲಿನ ಪರತ್ತಿನಲ್ಲಿ ಕಂಡ ತಾರೀಖಿನೊಳಗೆ ಸಲ್ಲದೆ ಇರುವ ಪ್ರತಿ ಮಾಹೆ ಖಿಸ್ತು ಬಾಕಿಗೆ ಶೇಕಡ ವರುಷ ಒಂದಕ್ಕೆ ಆರು ರೂಪಾಯಿನಂತೆ ಬಡ್ಡಿ ದಾಖಲ್ಮಾಡಿ ವಸೂಲ್ಮಾಡುತ್ತೆ.

5. ಗುತ್ತಿಗೆದಾರನು ರೂಪಾಯಿಗೆ ಒಂದಾಣೆಯಂತೆ ಲೋಕಲ್ ಸೆಸ್ಸು ಕೊಡಬೇಕು.

6. ಖಿಸ್ತಿನ ಬಾಕಿ ಮೊಬಲಗನ್ನ ಗುತ್ತಿಗೆದಾರನೇ ಆಗಲಿ ಜಾಮೀನ್‌ದಾರನೇ ಆಗಲಿ ಕೊಡಲು ತಪ್ಪಿದಲ್ಲಿ ಅದನ್ನು ಕಂದಾಯದ ಬಾಕಿಯಂತೆ ಅವರುಗಳಿಂದ ವಸೂಲ್ಮಾಡಲಾದೀತು.

7. ಸವಾಲ್ದಾರನು ದಿನೇಚರಿ ವಸೂಲಾಗುವ ಮೊಬಲಗು ತೋರಿಸುವ ಬಂದು ಕರಾರ್‌ನಾಮಾ ಲೆಖ್ಖವನ್ನು ಇಡಲು ಕರಾರು ಬರೆಕೊಡಬೇಕು. ಸದರಿ ಲೆಖ್ಖವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರು ಸಬ್ ಡಿವೀಜ್ಞ್ ಆಫಿಸರವರು ಅವುಲ್ದಾರ್ರು ಅಥವಾ ಅವರು ಹುಕುಂ ಮಾಡುವ ಅಧಿಕಾರಿಯು ತನಿಖೆ ಮಾಡಲು ಅವಕಾಶ ಕೊಡಬೇಕು.

8. ಇದರಲ್ಲಿ ನಮೂದಿರುವ ದರದಂತೆ ಶಿವಾಯಿ ಅನ್ಯಥಾ ಸುಂಕ ವಸೂಲ್ಮಾಡಕೂಡದು. ಇದಕ್ಕೆ ತಪ್ಪಿದರೆ ಗುತ್ತಿಗೆದಾರನು ಅಪಾದನೆಗೂ ಮತ್ತು ಗುತ್ತಿಗೆ ಕಳೆದುಕೊಳ್ಳುವದಕ್ಕೂ ಗುರಿಯಾದಾನು.

9. ಸರ್ಕಾರ ಸೈನ್ಯ, ಮಿಲಿಟರಿ ಸ್ಟೋರ್, ಸರ್ಕಾರಿ ಕೆಲಸದಮೇಲೆ ಇರುವ ಪೋಲೀಸು ಅಥವಾ ಇತರ ಉದ್ಯೋಗಸ್ಥರ ಸಲಕರಣೆಗಳು ಮತ್ತು ಸರ್ಕಾರಕ್ಕೆ ಸೇರಿದ್ದಂತ ಇಲಾಖಾ ಮುಖ್ಯಾಧಿಕಾರಿಯಿಂದ ಸರ್ಟಿಫಿಕೇಟಾಗಿರುವ ಸಾಮಾನುಗಳನ್ನು ಬಯ್ಯುವ ಗಾಡಿ ವಗೈರೆಗೂ ಸುಂಕ ವಸೂಲ್ಮಾಡಕೂಡದು.

10. ಸುಂಕಗಳ ದರದ ಪಟ್ಟಿಯನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ತಿಳಿಯುವಂತೆ ತಯಾರ್ಮಾಡಿ ಸುಂಕದ ಗೇಟಿನ ಬಳಿಯಲ್ಲಿ ಎಲ್ಲರು ನೋಡುವಂತೆ ತಗಲಹಾಕಿರಬೇಕು.

11. ಸುಂಕವನ್ನು ಸರ್ಕಾರದವರು ಇದಕ್ಕಾಗಿ ವಿಧಾಯಕ ಮಾಡಿರುವ ಸ್ಥಳಗಳಲ್ಲಿ ಶಿವಾಯಿ ವಸೂಲ್ಮಾಡಕೂಡದು.

12. ಗುತ್ತಿಗೇದಾರನು ಚೀಫ್ ಕಮಿಷನರವರ 4—11—76ರ ಮರ್ಕುಂ 274ನೆ ನಂಬರ್ ನೋಟಿಫಿಕೇಷ್ನ್ ಅನುಸರಿಸಿ ನಡದುಕೊಳ್ಳಬೇಕು.

ಇದಲ್ಲದೆ ಇನ್ನು ಅವಶ್ಯಕವಾದ ತಪಶೀಲುಗಳನ್ನು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ತಿಳಿದುಕೊಳ್ಳಬಹುದು.

ನಂಬರು.	ತಪಶೀಲ್.	ಭರ್ತಿ.			ಖಾಲಿ.		
		ರೂ.	ಆ.	ಪೈ.	ರೂ.	ಆ.	ಪೈ.
1	ಪ್ರತಿ ನಾಲ್ಕು ಚಕ್ರದ ಗಾಡಿ 1ಕ್ಕೆ	0	3	0	0	4	0
2	ಪ್ರತಿ ಎರಡು ಚಕ್ರದ ಗಾಡಿಗೆ	0	4	0	0	2	0
3	ಪ್ರತಿ ಎನ್ಮ್ಯ ವ ಎತ್ತಿಗೆ	0	0	6		...	
4	ಪ್ರತಿ ಆನೆ ಒಂದಕ್ಕೆ	1	0	0	1	0	0
5	ಪ್ರತಿ ಒಂಟೆ ಒಂದಕ್ಕೆ	0	8	0	0	8	0
6	ಪ್ರತಿ ಕುದುರೆಗು ಹೇರಲಿ ಅಥವಾ ಸವಾರಿ ಆಗಲಿ	0	1	0	0	1	0
7	ಪ್ರತಿ ಕುದುರೆಗು ಹೊರೆ ಇಲ್ಲದೆ ಇರಲಿ ಅಥವಾ ನಡದುಕೊಂಡಿದ್ದರೆ ...		...		0	1	0
8	ಪ್ರತಿ ಕತ್ತೆಗೂ ಸವಾರಿಯಾಗಿರಲಿ ಯಾ ಸುಮ್ಮನೆ ಬಯ್ಯಲಿ ...	0	0	6		...	

1. ಪಾದಚಾರಿಯಾದವರಮೇಲೆ ಸುಂಕ ವಸೂಲ್ಮಾಡಕೂಡದು.
2. ಗೊಬ್ಬರ ಭಂಡಿಯನ್ನು ಖಾಲಿ ಗಾಡಿಯಂತೆ ಭಾವಿಸತಕ್ಕದ್ದು.
3. ಸರ್ಕಾರದ ನೌಕರರು ಸರ್ಕಾರಿ ಕೆಲಸಕ್ಕಾಗಿ ಸಂಚರಿಸುವ ಕಾಲದಲ್ಲಿ ಇವರ ಗಾಡಿ ವಗೈರೆಗೆ ಸುಂಕ ವಸೂಲ್ಮಾಡಕೂಡದು.
4. ಹೇರು ಇಲ್ಲದ ಎತ್ತು, ಕೋಣ ಮತ್ತು ಹಸು ಕರುಗಳಿಗೆ ಸುಂಕ ವಸೂಲ್ಮಾಡತಕ್ಕದ್ದಲ್ಲಾ.
5. ಗಾಡಿ ಯಾ ಮೇಲೆ ನಮೂದಿಸಿರುವ ಕುದುರೆ ವಗೈರೆಗಳಮೇಲೆ 24 ಘಂಟೆ ಒಳಗೆ ಒಂದು ದಫಾಕ್ಕೆ ಮಿಾರಿ ಸುಂಕ ವಸೂಲ್ಮಾಡಕೂಡದು.

ನರಸಿಂಗರಾವ್ ಪೂರ್ಣಯ್ಯ, ಫೂರ್ ಡೆಪ್ಯುಟಿ ಕಮಿಷನರ್.